C.R.P.67

Form No.4 (Civil)
Deposition Sheets
(R.P.No.57)

**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸ್ಪೆಷಲ್. ಸಿ ಸಂಖ್ಯೆಃ **49/2020**

ಪ್ರಾಸಾ. **07** ಚಾಸಾ. **09**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಶ. |
| ತಂದೆಯ ಹೆಸರು | : | ಈರ ಕರಿಯಪ್ಪ. |
| ವಯಸ್ಸು | : | 30 ವರ್ಷಗಳು |
| ಉದ್ಯೋಗ | : | ವ್ಯವಸಾಯ |
| ವಾಸ | : | ನೇರಳಿಕೆರೆ, ದೊಡ್ಡಗೌಡಹಳ್ಳಿ, ಮಧುಗಿರಿ ತಾಲ್ಲೂಕು. |

ಪ್ರಮಾಣ ವಚನ ಬೋಧಿಸಿದ ದಿನಾಂಕಃ **15.01.2025**

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಈಗ ತೋರಿಸಿದ ದಿನಾಂಕ 26.08.2018 ರ ಅಮಾನತು ಪಂಚನಾಮೆ ದಾಖಲೆಯಲ್ಲಿ ನ್ನ ಸಹಿ ಇರುತ್ತದೆ. ಸದರಿ ಅಮಾನತು ಪಂಚನಾಮೆ ದಾಖಲೆಯನ್ನು ನಿ.ಪಿ-**31** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-**31(ಎ)** ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ದಿನಾಂಕ 26.08.2018 ರಂದು ಹೊಸಹಳ್ಳಿ ಪೋಲೀಸ್ ಠಾಣೆಯ ಹೊರಗಡೆ ಕಾಂಪೌಂಡ್ ನ ಬಳಿ ಸಹಿ ಹಾಕಿರುತ್ತೇನೆ.

2. ಮರಿಯಣ್ಣ ಎಂಬುವವರನ್ನು ವಿದ್ಯುತ್ ತಂತಿ ಬಿಟ್ಟು ಸಾಯಿಸಿ ಆತನನ್ನು ಗೌರಮ್ಮನ ಕೆರೆಯ ಅಂಗಳದಲ್ಲಿ ಹೂತುಹಾಕಿದ್ದರು, ಸದರಿ ಶವದ ಮೇಲಿದ್ದ ಬಟ್ಟೆಗಳನ್ನು ಮತ್ತು ವಸ್ತುಗಳನ್ನು ನನಗೆ ಪೋಲೀಸ್ ಠಾಣೆಯಲ್ಲಿ ತೋರಿಸಿದರು, ಆ ಸಮಯದಲ್ಲಿ ಪೋಲೀಸರವರು ಮಹಜರ್ ಕ್ರಮ ಜರುಗಿಸಿ ಸದರಿ

ವಸ್ತುಗಳು ಅಮಾನತುಪಡಿಸಿಕೊಂಡರು. ಆ ಸಮಯದಲ್ಲಿ ನನ್ನ ಜೊತೆ ಚಾ.ಸಾ. 10 ಚಿತ್ತಯ್ಯ ರವರು ಸಹ ಇದ್ದರು. ಪೋಲೀಸರು ನನಗೆ ಬಾಕ್ಸ್ ನಲ್ಲಿದ್ದ ಶವದ ಬಟ್ಟೆಗಳನ್ನು ಮತ್ತು ವಸ್ತುಗಳನ್ನು ತೋರಿಸಿರುತ್ತಾರೆ. ಸದರಿ ಬಟ್ಟೆಗಳ ವಿವರವನ್ನು ಹೇಳಬಲ್ಲೆ. ಸದರಿ ಬಾಕ್ಸ್ ನಲ್ಲಿ ಈಗ ತೋರಿಸಿದ ಮು.ಮಾ-1 ರಿಂದ 8 ಇದ್ದವು. ಮಹಜರ್ ಅನ್ನು ಸಂಜೆ 7-00 ರಿಂದ 7-45 ಗಂಟೆ ವರೆಗೆ ಮಾಡಿರುತ್ತಾರೆ.

ಪಾಟೀ ಸವಾಲುಃ ಶ್ರೀ ಎಸ್ . ಎನ್ ವಕೀಲರಿಂದಃ **2, 3, 7** ಮತ್ತು **8** ನೇ ಆರೋಪಿತರ ಪರವಾಗಿಃ

ಶ್ರೀ ಎಸ್.ಎನ್ ವಕೀಲರು ಹಾಜರಿದ್ದು, ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಾಕ್ಷಿಯ ಪಾಟೀಸವಾಲನ್ನು ರೂ. 1,500/- ಗಳ ಸಾಕ್ಷಿ ಭತ್ಯೆಯೊಂದಿಗೆ ಮುಂದಾಡಲಾಯಿತು. .

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.